**ದಿನಾಂಕಃ 02-04-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀಮತಿ ಎಸ್ ಆರ್ ಎಸ್ ವಕೀಲರಿಂದಃ**

1. ನಾನು 7 ನೇ ತರಗತಿಯವರೆಗೆ ಓದಿದ್ದೇನೆ. ನಾನು ಉರ್ದು ಮಾಧ್ಯಮದಲ್ಲಿ ಓದಿದ್ದೇನೆ. ಮೊದಲು ನಾನು ಅಡವಿ ಆಂಜನೇಯ ಬಡಾವಣೆಯಲ್ಲಿ ಬಾಡಿಗೆ ಮನೆಯಲ್ಲಿ ಇದ್ದೆ. ನನಗೆ ಸ್ವಂತ ಮನೆ ಇಲ್ಲ. ನನ್ನ ಮನೆ 6 ನೇ ಕ್ರಾಸನಲ್ಲಿದೆ ಹಾಗೂ ಅರ್ಜಿದಾರಳ ಮನೆ 3 ನೇ ಕ್ರಾಸ್ ನಲ್ಲಿ ಇದೆ. ನನಗೆ 5-6 ವರ್ಷಗಳಿಂದ ಅರ್ಜಿದಾರಳ ಪರಿಚಯ ಇದೆ. ನಾನು ಅರ್ಜಿದಾರಳನ್ನು ಮದುವೆಯಾಗಿಲ್ಲ. ನಿಪಿ-4 ಎಂದು ಗುರುತಿಸಲಾಗಿರುವ ಪೋಟೊವನ್ನು ಈಗ ನೋಡುತ್ತಿದ್ದು, ಅದರಲ್ಲಿ ನಾನು ಹಾಗೂ ನಜರುನ್ನೀಸಾ ಇರುವುದು ಕಂಡುಬರುತ್ತದೆ. ನನ್ನ ಹೆಂಡತಿ ಹುಚ್ಚಿಯಾಗಿದ್ದು, ಆಕೆ ಮನೆಯಲ್ಲಿ ಇಲ್ಲ ಎಂದು ಸುಳ್ಳು ಹೇಳಿ ಅರ್ಜಿದಾರಳನ್ನು ಮದುವೆಯಾಗಿದ್ದೇನೆ ಎಂದರೆ ಸರಿಯಲ್ಲ . ನಿಪಿ-3 ಎಂದು ಗುರುತಿಸಲಾಗಿರುವ ಒಂದು ದಾಖಲೆಯನ್ನು ಈಗ ನೋಡುತ್ತಿದ್ದು, ಅದರಲ್ಲಿರುವ ಪೋಟೊ ನನ್ನದು ಹಾಗೂ ನಜರುನ್ನೀಸಾ ಅವರು ಇರುತ್ತದೆ.

2. ನಿಪಿ-4 ರಲ್ಲಿರುವ ಪೋಟೊವನ್ನು ಯಾವಾಗ ತೆಗೆಯಿಸಿಕೊಂಡಿದ್ದೀರಿ ಎಂದರೆ ಸಾಕ್ಷಿಯು ಆ ಪೋಟೊವನ್ನು ನಾನು ತೆಗೆಯಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ಸದರಿ ಪೋಟೋವನ್ನು ದಿಃ 12-05-2016 ರಂದು ತೆಗೆಯಲಾಗಿದೆ ಎಂದರೆ ಸರಿಯಲ್ಲ. ನಾನು ಅರ್ಜಿದಾರಳನ್ನು ಮದುವೆಯಾದ ಸಮಯದಲ್ಲಿಯೇ ಸದರಿ ಪೋಟೊ ತೆಗೆಯಲಾಗಿದೆ ಎಂದರೆ ಸರಿಯಲ್ಲ . ನಿಪಿ-4 ಎಂದು ಗುರುತಿಸಲಾಗಿರುವ ಪೋಟೊಗಳ ಪೈಕಿ ಇನ್ನೊಂದು ಪೋಟೊ ಈಗ ನೋಡುತ್ತಿದ್ದು, ಅದರಲ್ಲಿ ಕಾಣುತ್ತಿರುವುದು ನಾನು ಹಾಗೂ ನಜರುನ್ನೀಸಾ. ಸಾಕ್ಷಿಯು

ಮುಂದುವರೆದು ಆ ಫೋಟೊವನ್ನು ತಾನು ತೆಗೆಯಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ಸದರಿ ಫೋಟೊವನ್ನು ಮೈಸೂರಿನಲ್ಲಿ ತೆಗೆಯಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ . ದಿಃ 21-09-2016 ಎಂದು ದಿನಾಂಕ ಹೊಂದಿರುವ ಒಂದು ಫೋಟೊ ಈಗ ನೋಡುತ್ತಿದ್ದು, ಅದರಲ್ಲಿ ಕಾಣಿಸುತ್ತಿರುವ ವ್ಯಕ್ತಿಗಳು ಎಂದರೆ ನಾನು ಹಾಗೂ ನಜರುನ್ನೀಸಾ. ಸಾಕ್ಷಿಯು ಮುಂದುವರೆದು ಆ ಫೋಟೊವನ್ನು ನಾನು ತೆಗೆಯಿಸಿಕೊಂಡಿಲ್ಲ ಎಂದು ನುಡಿಯುತ್ತಾರೆ. ಸದರಿ ಫೋಟೋವನ್ನು ಗುಲ್ಬರ್ಗದಲ್ಲಿ ತೆಗೆಯಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ .

3. ನಾನು ಫಾರುಕ್ ಅಲಿ ವರ್ಕ ಶಾಪ್ ನಲ್ಲಿ ಕೂಲಿ ಕೆಲಸ ಮಾಡುತ್ತಿದ್ದೆ. ನಿಪಿ-1 ಎಂದು ಗುರುತಿಸಲಾಗಿರುವ ದಾಖಲೆಯನ್ನು ಈಗ ನೋಡುತ್ತಿದ್ದು, ಅದರಲ್ಲಿ ನನ್ನ ಸಹಿ ಇಲ್ಲ . ನನ್ನ ಹಾಗೂ ಅರ್ಜಿದಾರಳ ಮದುವೆಯ ಸಮಯದಲ್ಲಿ ಸದರಿ ದಾಖಲೆಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ . ಸಾಕ್ಷಿಯುು ಮುಂದುವರೆದು ಸದರಿ ದಾಖಲೆಯಲ್ಲಿ ತನ್ನ ಸಹಿಯನ್ನು ಖೊಟ್ಟಿ ಸೃಷ್ಠಿಸಿದ್ದಾರೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ನನ್ನ ಹಾಗೂ ಅರ್ಜಿದಾರಳ ಮದುವೆಯ ಕುರಿತು ನಮ್ಮ ಸಮಾಜದವರೆ ನೀಡಿದ್ದಾರೆ ಎಂದರೆ ಸರಿಯಲ್ಲ .

4. ನಿಪಿ-3 ರಲ್ಲಿರುವ ದಾಖಲೆಗೆ ನಾನೇ ಮಾಹಿತಿ ನೀಡಿ, ಸದರಿ ದಾಖಲೆಯನ್ನು ತಯಾರಿಸಿದ್ದೇನೆ ಎಂದರೆ ಸರಿಯಲ್ಲ . ಅರ್ಜಿದಾರಳು ಬಟ್ಟೆ ವ್ಯಾಪಾರ ಮಾಡುತ್ತಿದ್ದಳು ಎಂದರೆ ನಿಜ. ವ್ಯಾಪಾರದಿಂದ ಆಕೆ ಒಂದು ವರೆ ಯಿಂದ 2 ಲಕ್ಷ ರೂಪಾಯಿ ಹಣ ಹೊಂದಿದ್ದಳು ಎನ್ನುವುದು ನನಗೆ ಗೊತ್ತಿಲ್ಲ. ಆಕೆಯ ಬಳಿ ಹಣ ಇರುವುದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. 2016 ರಲ್ಲಿ ನಾನು ಹಂಚಿನ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ನಿಜ. ಆ ಸಮಯದಲ್ಲಿ ನನಗೆ ಅರ್ಜಿದಾರಳ ಪರಿಚಯವಾಗಿತ್ತು ಮತ್ತು ಆಕೆ ಗಂಡನಿಂದ ವಿಚ್ಛೇದನ

ಪಡೆದಿದ್ದಳು ಎಂದರೆ ಸರಿಯಲ್ಲ . ನಾನು ಅರ್ಜಿದಾರಳ ಮನೆಗೆ ಹೋಗುತ್ತಿದ್ದರಿಂದ, ನಮ್ಮ ಮೇಲೆ ಸಂಶಯ ಉಂಟಾಗಿ, ಆಕೆಯ ಗಂಡ ವಿಚ್ಚೇದನ ನೀಡಿದ್ದಾನೆ ಎಂದರೆ ಸರಿಯಲ್ಲ . ಅದಕ್ಕಿಂತ ಮೊದಲು ಅರ್ಜಿದಾರಳ ಮೊದಲ ಗಂಡ ಮುನಿರ್ ಖಾಜಿ ಮರಣ ಹೊಂದಿದ್ದನು ಎಂದರೆ ನಿಜ. ಆ ನಂತರ ಆಕೆ ಫಜರು ಸೌಧಾಗರ್ ನೊಂದಿಗೆ 2 ನೇ ಮದುವೆಯಾಗಿದ್ದಳು ಎಂದರೆ ನಿಜ. ಆಕೆ 2 ನೇ ಗಂಡನಿಂದ ವಿಚ್ಚೇದನ ಪಡೆದ ನಂತರ, ನಾನು ಆಕೆಯಿಂದ ಹಣ ಪಡೆದುಕೊಂಡು ಆಕೆಯೊಂದಿಗೆ ಚೆನ್ನಾಗಿದ್ದೆ ಎಂದರೆ ಸರಿಯಲ್ಲ .

5. ನಾನು ಶಿರಾಳಕೊಪ್ಪದಲ್ಲಿ ಲೇತ್ ಮಶಿನ್ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ . ಈಗ ನಾನು ತೊಗರ್ಸಿಯಲ್ಲಿ ಲೇತ್ ಮಶಿನ್ ಇಟ್ಟಿದ್ದೇನೆ ಎಂದರೆ ಸರಿಯಲ್ಲ . ಈಗ ನಾನು ತೋಗರ್ಸಿಯಲ್ಲಿ ವಾಸಿಸುವುದಿಲ್ಲ. ನಾನು ತೊಗರ್ಸಿಯಲ್ಲಿ ವ್ಯವಹಾರ ಮಾಡುತ್ತಿದ್ದರೂ ಸಹ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾರ್ಷಿಕ 4 ರಿಂದ 5 ಲಕ್ಷ ರೂಪಾಯಿ ಆದಾಯ ಹೊಂದಿದ್ದೆ ಎಂದರೆ ಸರಿಯಲ್ಲ. ನಾನು ಅರ್ಜಿದಾರಳನ್ನು ಮದುವೆಯಾದ ನಂತರ ಆಕೆಯ 2 ಮಕ್ಕಳು ಆಕೆಯಿಂದ ದೂರವಾಗಿದ್ದಾರೆ ಎಂದರೆ ಸರಿಯಲ್ಲ . ಸಾಕ್ಷಿಯು ಮುಂದುವರೆದು ತಾನು ಅರ್ಜಿದಾರಳನ್ನು ಮದುವೆಯಾಗಿಲ್ಲ ಎಂದು ನುಡಿಯುತ್ತಾರೆ.

6. ನಾನು ಅರ್ಜಿದಾರಳೊಂದಿಗೆ ಶಿರಾಳಕೊಪ್ಪ ಗ್ರಾಮದಲ್ಲಿ ವಾಸಿಸುತ್ತಿದ್ದೆ ಎಂದರೆ ಸರಿಯಲ್ಲ . ನನ್ನ ಹಾಗೂ ಅರ್ಜಿದಾರಳ ಸಂಬಂಧದ ಕುರಿತು ನನ್ನ ಹೆಂಡತಿಗೆ ಗೊತ್ತಾಗಿ ಆಕೆ ಜಗಳ ಮಾಡಿದಳು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಈ ಪ್ರಕರಣ ದಾಖಲಿಸಿದ ನಂತರವೇ ತನಗೆ ಅರ್ಜಿದಾರಳ ಕುರಿತು ಗೊತ್ತಾಗಿದೆ ಎಂದು ನುಡಿಯುತ್ತಾರೆ. ನಾನು, ನನ್ನ

ಹೆಂಡತಿ ಹಾಗೂ ಅರ್ಜಿದಾರಳು ಶಿರಾಳಕೊಪ್ಪ ಗ್ರಾಮದಲ್ಲಿಯೇ ವಾಸಿಸುತ್ತಿದ್ದೆವು ಎಂದರೆ ಸರಿಯಲ್ಲ. ನಾನು ಅರ್ಜಿದಾರಳಿಗೆ ಹೊಡೆ ಬಡಿ ಮಾಡಿದ್ದರಿಂದ ಆಕೆ ದೂರು ಸಲ್ಲಿಸಿದ್ದಳು ಎಂದರೆ ಸರಿಯಲ್ಲ . ಆ ಸಮಯದಲ್ಲಿ ಸಮಾಜದ ಮುಖಂಡರು ಪಂಚಾಯಿತಿ ಮಾಡಿ, ನಮಗೆ ರಾಣೇಬೆನ್ನೂರಿನಲ್ಲಿ ಇರುವಂತೆ ಹೇಳಿದ್ದರು ಎಂದರೆ ಸರಿಯಲ್ಲ. ಅರ್ಜಿದಾರಳ ವಿರುದ್ಧ ನನ್ನ ಹೆಂಡತಿಯ ಕಡೆಯಿಂದ ಸುಳ್ಳು ದೂರು ಕೊಡಿಸಿದ್ದೇನೆ ಎಂದರೆ ಸರಿಯಲ್ಲ. ಈಗಲೂ ಸಹ ಅರ್ಜಿದಾರಳು ನನ್ನ ಮನೆಗೆ ಬಂದು ಹೋಗುತ್ತಾಳೆ ಎಂದರೆ ಸರಿಯಲ್ಲ . ಅರ್ಜಿದಾರಳ ಮೊದಲನೇ ಗಂಡ ಮರಣ ಹೊಂದಿದ ನಂತರ ಆಕೆ ವಿಧವಾ ವೇತನ ಪಡೆಯುತ್ತಿದ್ದಳು ಆದರೆ ನಾನು ಆಕೆಯನ್ನು ನೋಡಿಕೊಳ್ಳುವುದಾಗಿ ಭರವಸೆ ನೀಡಿ, ವಿಧವಾ ವೇತನ ಪಡೆಯದಂತೆ ಹೇಳಿದ್ದೆ ಎಂದರೆ ಸರಿಯಲ್ಲ . ನನ್ನ ಸಾಕ್ಷಿಯಲ್ಲಿ ಹೇಳಿರುವಂತೆ ಅರ್ಜಿದಾರಳಿಗೆ 3 ನೇ ಗಂಡನು ಇಲ್ಲ, ಒಂದುವೇಳೆ ಇದ್ದಿದ್ದರೆ ಆತನ ಹೆಸರು ಬರೆಯಿಸುತ್ತಿದ್ದೆ ಎಂದರೆ ಸರಿಯಲ್ಲ .

7. ಅರ್ಜಿದಾರಳಿಂದ ಹಣ ಪಡೆದು, ಶಿರಾಳಕೊಪ್ಪದಲ್ಲಿ ಲೇತ್ ಮಶಿನ್ ಇಟ್ಟಿದ್ದೇನೆ ಎಂದರೆ ಸರಿಯಲ್ಲ . ಶಿರಾಳಕೊಪ್ಪದಲ್ಲಿ ಇರುವ ನಿಮ್ಮ ಕೋಣೆಯಲ್ಲಿ ಅರ್ಜಿದಾರಳು ನಿಮ್ಮೊಂದಿಗೆ ಎಷ್ಟು ದಿನ ಇದ್ದಳು ಎಂಬ ಪ್ರಶ್ನೆಗೆ ಸಾಕ್ಷಿಯು 12 ದಿನಗಳವರೆಗೆ ಇದ್ದಳು ಎಂದು ನುಡಿಯುತ್ತಾರೆ. ಅದೇ ರೂಂ ನಲ್ಲಿ ನಾನು ಅರ್ಜಿದಾರಳೊಂದಿಗೆ ವೈವಾಹಿಕ ಜೀವನ ನಡೆಸಿದ್ದೇನೆ ಎಂದರೆ ಸರಿಯಲ್ಲ . ಯಾವುದೇ ಕಾರಣ ಇಲ್ಲದೇ ಒಬ್ಬ ಮಹಿಳೆ ಇನ್ನೊಬ್ಬ ವ್ಯಕ್ತಿಯ ಮನೆಯಲ್ಲಿ ವಾಸಿಸುವುದಿಲ್ಲ, ನಾನು ಅರ್ಜಿದಾರಳನ್ನು ಮದುವೆಯಾಗಿದ್ದರಿಂದಲೇ ಆಕೆ ನನ್ನ ಮನೆಗೆ ಬಂದಿದ್ದಳು ಎಂದರೆ ಸರಿಯಲ್ಲ . ನನ್ನ ಹೆಂಡತಿಯೊಂದಿಗೆ ನನ್ನ ಸಂಬಂಧ ಸರಿಯಾದ ನಂತರ, ಅರ್ಜಿದಾರಳಿಂದ ಹಣ ಪಡೆದು ತೊಂದರೆ ನೀಡುತ್ತಿದ್ದೆ ಎಂದರೆ ಸರಿಯಲ್ಲ . ಅರ್ಜಿದಾರಳು ಹಣ ಮರಳಿ ಕೇಳಿದ ನಂತರ

ನಾನು ಆಕೆಗೆ ಹೊಡೆ ಬಡಿ ಮಾಡಿದ್ದೇನೆ ಎಂದರೆ ಸರಿಯಲ್ಲ . ಆ ಕುರಿತು ಅರ್ಜಿದಾರಳು ದೂರು ಸಲ್ಲಿಸಿದ್ದಳು ಎಂದರೆ ಸಾಕ್ಷಿಯು ಪೋಲಿಸರು ಕರೆದಿದ್ದರಿಂದ ಠಾಣೆಗೆ ಹೋಗಿದ್ದೆ ಎಂದು ನುಡಿಯುತ್ತಾರೆ.

8. ನಾನು ಅರ್ಜಿದಾರಳೊಂದಿಗೆ ರಾಣೇಬೆನ್ನೂರಿನ ಬಾಡಿಗೆ ಮನೆಯಲ್ಲಿ ಇರುವ ವಿಷಯ ನನ್ನ ಹೆಂಡತಿ ಮಕ್ಕಳಿಗೆ ಗೊತ್ತಿತ್ತು ಎಂದರೆ ಸರಿಯಲ್ಲ. ದಾಖಲಿಸಿರುವ ಪ್ರಕರಣವನ್ನು ಹಿಂತೆಗೆದುಕೊಂಡರೆ ವೈವಾಹಿಕ ಜೀವನ ನಡೆಸುತ್ತೇನೆ ಎಂದು ಅರ್ಜಿದಾರಳಿಗೆ ನಾನು ಹೇಳಿದ್ದೆ ಎಂದರೆ ಸರಿಯಲ್ಲ . ನನ್ನ ಮಗ ನರ್ಸಿಂಗ್ ಕಲಿಯುತ್ತಿದ್ದಾನೆ. ಇನ್ನೊಬ್ಬ ಮಗ ಡಿಪ್ಲೋಮಾ ಓದುತ್ತಿದ್ದಾನೆ. ಮಗಳು ನೀಟ್ ತರಬೇತಿ ಪಡೆಯುತ್ತಿದ್ದಾಳೆ. ನನಗೆ ಸಾಕಷ್ಟು ಆದಾಯ ಬರುವುದರಿಂದಲೇ ಮಕ್ಕಳಿಗೆ ಶಿಕ್ಷಣ ಕೊಡಿಸುತ್ತಿದ್ದೇನೆ ಎಂದರೆ ಸರಿಯಲ್ಲ .

9. ನಾನು ಹಾಗೂ ಅರ್ಜಿದಾರಳು ಮೈಸೂರಿನ ದೀಪಕ್ ಲಾಡ್ಜ ನಲ್ಲಿ ಉಳಿದುಕೊಂಡಿದ್ದೆವು ಎಂದರೆ ಸರಿಯಲ್ಲ . ಈಗ ನೋಡುತ್ತಿರುವ ಒಂದು ರಶೀದಿಯಲ್ಲಿ ನನ್ನ ಸಹಿ ಇದೆ ಎಂದರೆ ಸರಿಯಲ್ಲ .

**ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.